KASM630010022022

Presented on : 06-08-2022
Registered on : 06-08-2022
Decided on : 17-08-2026
Duration :04 years, 0 months, 11 days

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ.

: **ಉಪಸ್ಥಿತರು**:

ಶ್ರೀ **ಮಾದೇಶ ಎಂ.ವಿ.,** ಬಿ.ಕಾಂ., ಎಲ್.ಎಲ್.ಬಿ.,
ಪ್ರಭಾರ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಾಗರ.

ದಿನಾಂಕಃ 17 ನೇ ಆಗಸ್ಟ್ 2026

ಸಿ.ಸಿ. ಸಂಖ್ಯೆ 784/2022

ಪಿರ್ಯಾದಿದಾರರುಃ

ರಾಮಚಂದ್ರಪ್ಪ ಬಿನ್ ಕುಂಬತ್ತಿ ಬಸಪ್ಪ
ವಯಸ್ಸು ಸುಮಾರು 71 ವರ್ಷ,
ವಾಸಃ ಬಸವನಬ್ಯಾಣ, ಬರೂರು ಗ್ರಾಮ,
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

(ಶ್ರೀ ಆರ್.ಹೆಚ್.ಬಿ., ವಕೀಲರು)

ವಿರುದ್ಧ

ಆರೋಪಿ: ಪರಶುರಾಮ ಬಿನ್ ಚೌಡಪ್ಪ
ವಯಸ್ಸು ಸುಮಾರು 45 ವರ್ಷ,
ಕಾರ್ಯನಿರ್ವಹಣಾಧಿಕಾರಿ,

ವ್ಯವಸಾಯ ಸೇವಾ ಸಹಕಾರ ಸಂಘ ನಿ.
ಬರೂರು ಗ್ರಾಮ ಮತ್ತು ಅಂಚೆ,
ಸಾಗರ ತಾಲ್ಲೂಕು,ಶಿವಮೊಗ್ಗ ಜಿಲ್ಲೆ.

(ಶ್ರೀ ಎಂ.ಆರ್.ಎಸ್., ವಕೀಲರು)

<u>ತೀರ್ಪು</u>

ಆರೋಪಿತನು ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆಯ ಕಲಂ 138 ರ ಅಡಿಯಲ್ಲಿ ಅಪರಾಧವೆಸಗಿದ್ದಾನೆಂದು ಪ್ರಸ್ತುತ ಖಾಸಗಿ ದೂರನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 200 ರ ಅಡಿಯಲ್ಲಿ ಫಿರ್ಯಾದುದಾರರು ಸಲ್ಲಿಸಿರುತ್ತಾರೆ.

2. **ಫಿರ್ಯಾದುದಾರರ ದೂರಿನ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇದೆ.**

ಆರೋಪಿ ಮತ್ತು ಫಿರ್ಯಾದುದಾರರು ಬಹಳ ವರ್ಷಗಳಿಂದ ಪರಿಚಿತರಾಗಿದ್ದು, 2022 ನೇ ಸಾಲಿನ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಆರೋಪಿತನು ತನ್ನ ಗೃಹಕೃತ್ಯದ ಅಡಚಣೆಗಾಗಿ 2,10,000/- ರೂಗಳನ್ನು ಸಾಲವಾಗಿ ಬೇಕು ಎಂದು ಕೇಳಿ, ದಿನಾಂಕ 05/03/2022 ರಂದು 2,10,000/- ರೂಗಳನ್ನು ಫಿರ್ಯಾದಿಯ ಮನೆಯಲ್ಲಿ ಆರೋಪಿತನು ನಗದಾಗಿ ಸಾಲವನ್ನು ಪಡೆದುಕೊಂಡಿರುತ್ತಾನೆ. ಸದರಿ ಹಣವನ್ನು 3 ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ಆರೋಪಿತನು ತಿಳಿಸಿದ್ದು, ನಂತರ ಸದರಿ ಹಣವನ್ನು ವಾಪಸ್ಸು ಕೊಡುವಂತೆ ಫಿರ್ಯಾದಿಯು ಕೇಳಿದಾಗ ದಿನಾಂಕ 04/07/2022 ರಂದು ಆರೋಪಿತನು ಸದರಿ ಸಾಲದ ಹಣದ ಮರುಪಾವತಿಗಾಗಿ ಶಿವಮೊಗ್ಗ ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಸೆಂಟ್ರಲ್ ಬ್ಯಾಂಕ್, ಸಾಗರ ಶಾಖೆಯ ಚೆಕ್ ನಂಬರ್ 129849 ನ್ನು

2,10,000/- ರೂಗಳಿಗೆ ನೀಡಿರುತ್ತಾನೆ. ಸದರಿ ಚೆಕ್ಕನ್ನು ಫಿರ್ಯಾದಿಯು ತನ್ನ ಖಾತೆ ಹೊಂದಿರುವ ಶಿವಮೊಗ್ಗ ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಸೆಂಟ್ರಲ್ ಬ್ಯಾಂಕ್, ಸಾಗರ ಶಾಖೆಗೆ ದಿನಾಂಕ 04/07/2022 ರಂದು ನಗದೀಕರಣಕ್ಕಾಗಿ ಹಾಜರುಪಡಿಸಿದಾಗ, ಆರೋಪಿತನು ನೀಡಿದ ಚೆಕ್ಕು ಅವನ **ಖಾತೆಯಲ್ಲಿ ಸಾಕಷ್ಟು ಹಣವಿಲ್ಲ** ಎಂಬ ಹಿಂಬರಹದೊಂದಿಗೆ ವಾಪಸ್ಸಾಗಿರುತ್ತದೆ. ದಿನಾಂಕ 05/07/2022 ರಂದು ಆರೋಪಿತನು ನೀಡಿದ ಚೆಕ್ಕು ಅನಾಧರಣಗೊಂಡ ಕುರಿತು ಮಾಹಿತಿಯನ್ನು ನೀಡಿ, ಆ ಹಣವನ್ನು ನೋಟೀಸು ತಲುಪಿದ 15 ದಿನಗಳ ಒಳಗಾಗಿ ಮರುಪಾವತಿ ಮಾಡುವಂತೆ ನೋಂದಾಯಿತ ಅಂಚೆ ಮೂಲಕ ಲೀಗಲ್ ನೋಟೀಸನ್ನು ನೀಡಿರುತ್ತಾರೆ. ಸದರಿ ನೋಟೀಸು ದಿನಾಂಕ 07/07/2022 ರಂದು ಆರೋಪಿತನಿಗೆ ಜಾರಿಯಾಗಿದ್ದರೂ ಸಹ, ಸದರಿ ನೋಟೀಸಿಗೆ ಆರೋಪಿತನು ಉತ್ತರವನ್ನು ನೀಡಿರುವುದಿಲ್ಲ ಹಾಗೂ ಚೆಕ್ಕಿನ ಹಣವನ್ನು ಫಿರ್ಯಾದಿಗೆ ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ, ಆರೋಪಿತನ ವಿರುದ್ಧ ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆಯ ಕಲಂ 138 ರ ಅಡಿಯಲ್ಲಿ ಕ್ರಮ ತೆಗೆದುಕೊಳ್ಳುವಂತೆ ಕೋರಿ ಪ್ರಸ್ತುತ ದೂರನ್ನು ಸಲ್ಲಿಸಿರುತ್ತಾರೆ.

3. ನ್ಯಾಯಾಲಯವು ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆಯ ಅಡಿಯಲ್ಲಿನ ಆರೋಪಿತನ ವಿರುದ್ಧ ಆಪಾದಿಸಿರುವ ಆರೋಪಕ್ಕೆ ಸಂಜ್ಞಾನವನ್ನು ತೆಗೆದುಕೊಂಡು, ನಂತರ ಆರೋಪಿತನಿಗೆ ಸಮನ್ಸ್ ಅನ್ನು ನೀಡಿರುತ್ತದೆ. ಸಮನ್ಸ್ ಜಾರಿಯಾದ ನಂತರ, ಆರೋಪಿ ತನ್ನ ವಕೀಲರ ಮೂಲಕ ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನನ್ನು

ಪಡೆದುಕೊಂಡಿರುತ್ತಾನೆ. ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆಯ ಕಲಂ 138ರ ಅಡಿಯಲ್ಲಿ ಆರೋಪಿಸಿರುವ ಅಪರಾಧಕ್ಕಾಗಿ ಆರೋಪಿತನಿಗೆ ಆರೋಪವನ್ನು ರಚಿಸಿ, ಆತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು. ಸದರಿ ಆರೋಪಿತನು ತನ್ನ ಅಪಾಧನೆಯನ್ನು ನಿರಾಕರಿಸಿ, ವಿಚಾರಣೆಯಾಗಲಿ ಎಂದು ಕೇಳಿಕೊಂಡ ಮೇರೆಗೆ ಪ್ರಕರಣವನ್ನು ವಿಚಾರಣೆಗೆ ಮುಂದುಡಲಾಯಿತು.

4. ಫಿರ್ಯಾದಿಯು ತನ್ನ ದೂರಿನಲ್ಲಿ ಹೇಳಿರುವ ಸಂಗತಿಗಳನ್ನು ಸಾಬೀತುಪಡಿಸುವ ಸಲುವಾಗಿ ತನ್ನನ್ನು ತಾನು ಸಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ತನ್ನ ಮುಖ್ಯ ವಿಚಾರಣೆಯ ಸಲುವಾಗಿ ಶಪಥ ಪತ್ರವನ್ನು ಸಲ್ಲಿಸಿ, ಸದರಿ ಶಪಥ ಪತ್ರದಲ್ಲಿ ದೂರಿನಲ್ಲಿ ಹೇಳಿರುವ ಎಲ್ಲಾ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ. ಸದರಿ ಸಿ.ಡಬ್ಲ್ಯೂ-1 ರವರು ತಮ್ಮ ಮೌಖಿಕ ಸಾಕ್ಷ್ಯದ ಸಮರ್ಥನೆಗೆ ಪೂರಕವಾಗಿ 5 ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಿಕೊಂಡಿರುತ್ತಾರೆ ಹಾಗೂ ಫಿರ್ಯಾದಿಯು ತನ್ನ ಪರವಾಗಿ ಇತರೆ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ.

5. ಫಿರ್ಯಾದುದಾರರ ಪರ ಸಾಕ್ಷಿ ವಿಚಾರಣೆ ಮುಗಿದ ನಂತರ ಆರೋಪಿತನನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರ ಅಡಿಯಲ್ಲಿ ವಿಚಾರಣೆ ಮಾಡಿ ಅವನ ಹೇಳಿಕೆಯನ್ನು ಅಭಿಲೇಖಿಸಲಾಯಿತು. ಆರೋಪಿಯು ಸದರಿ ಹೇಳಿಕೆಯಲ್ಲಿ, ತನ್ನ ವಿರುದ್ಧ ಸಿ.ಡಬ್ಲ್ಯೂ-1 ರವರು ನೀಡಿದ ಎಲ್ಲಾ ಹೇಳಿಕೆಗಳನ್ನು ನಿರ್ದಿಷ್ಟವಾಗಿ ಅಲ್ಲಗಳೆದಿದ್ದಾರೆ. ನಂತರ, ಆರೋಪಿತನು ತನ್ನನ್ನು ತಾನು ಡಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ತನ್ನ

ಮುಖ್ಯ ವಿಚಾರಣೆಯ ಬಾಬತ್ತು ಪ್ರಮಾಣಪತ್ರವನ್ನು ಸಲ್ಲಿಸಿ, 9 ದಾಖಲೆಗಳನ್ನು ತನ್ನ ಪರವಾಗಿ ನಿಶಾನೆಗಳಾಗಿ ಗುರುತಿಸಿಕೊಂಡಿರುತ್ತಾರೆ. ಇತರೆ ಸಾಕ್ಷಿದಾರರನ್ನು ಆರೋಪಿತನು ತನ್ನ ಪರವಾಗಿ ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ.

6. ಉಭಯ ಪಕ್ಷಗಾರರ ಪರ ವಕೀಲರು ಮಂಡಿಸಿದ ವಾದವನ್ನು ಆಲಿಸಲಾಯಿತು ಮತ್ತು ಕಡತದಲ್ಲಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಯಿತು. ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

ಅಂಶಗಳು

1. ಆರೋಪಿಯು ಫಿರ್ಯಾದಿಗೆ ಕಾನೂನಾತ್ಮಕವಾಗಿ ಮರುಪಾವತಿ ಮಾಡಬೇಕಾದ ಹಣಕ್ಕಾಗಿ ತನ್ನ ಖಾತೆ ಹೊಂದಿರುವ ಶಿವಮೊಗ್ಗ ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಸೆಂಟ್ರಲ್ ಬ್ಯಾಂಕ್, ಸಾಗರ ಶಾಖೆಯ ಚೆಕ್ ನಂಬರ್ 129849 ನ್ನು 2,10,000/- ರೂಗಳಿಗೆ ದಿನಾಂಕ 04/07/2022 ರಂದು ಫಿರ್ಯಾದಿಯ ಪರವಾಗಿ ನೀಡಿರುತ್ತಾರೆಯೇ??

2. ಸದರಿ ಚೆಕ್ಕನ್ನು ಫಿರ್ಯಾದಿಯು ತನ್ನ ಖಾತೆ ಹೊಂದಿರುವ ಶಿವಮೊಗ್ಗ ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಸೆಂಟ್ರಲ್ ಬ್ಯಾಂಕ್ ಸಾಗರ ಶಾಖೆಗೆ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಸದರಿ ಚೆಕ್ಕು **ಫಂಡ್ಸ್ ಇನ್‌ಸಫಿಷಿಯೆಂಟ್** ಎಂಬ ಕಾರಣಕ್ಕಾಗಿ ದಿನಾಂಕ 04/07/2022 ರಂದು ಅನಾದರಣಗೊಂಡಿದೆಯೇ?

3. ಫಿರ್ಯಾದಿಯ ನಿಗಧಿತ ಕಾಲಾವಧಿಯಲ್ಲಿ ಆರೋಪಿತಳಿಗೆ ನೋಟೀಸನ್ನು ನೀಡಿ, ಚೆಕ್ಕಿನಲ್ಲಿ ಒಳಗೊಂಡಿರುವ ಹಣವನ್ನು ಪಾವತಿಸುವಂತೆ ಕೇಳಿಕೊಂಡಿದ್ದಾರೆಯೇ?

4. ಸದರಿ ನೋಟೀಸು ಅನ್ನು ಆರೋಪಿತಳಿಗೆ ನೀಡಿದ ನಂತರವೂ ಸಹ, ಆರೋಪಿತಳು ಚೆಕ್ಕಿನ ಹಣವನ್ನು ನಿಗದಿತ ಅವಧಿಯಲ್ಲಿ ಪಾವತಿಸದೆ ಇರುವ ಕಾರಣ, ಆರೋಪಿತಳು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆಯೇ?

5. ಯಾವ ಆದೇಶ?

7. ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರವು ಈ ಕೆಳಕಂಡಂತೆ ಇರುತ್ತದೆ.

ಅಂಶ. 1 : ಸಕಾರಾತ್ಮಕವಾಗಿ

ಅಂಶ. 2 : ಸಕಾರಾತ್ಮಕವಾಗಿ

ಅಂಶ. 3 : ಸಕಾರಾತ್ಮಕವಾಗಿ

ಅಂಶ. 4 : ಸಕಾರಾತ್ಮಕವಾಗಿ

ಅಂಶ.5 : ಈ ಕೆಳಕಂಡ ಕಾರಣಗಳಿಂದಾಗಿ ಅಂತಿಮ ಆದೇಶದಂತೆ –

ಕಾ ರ ಣ ಗ ಳು

8. **ಅಂಶ–1 ರಿಂದ 4:–** ಈ ನಾಲ್ಕು ಅಂಶಗಳ ಮೇಲಿನ ಚರ್ಚೆಯು ಒಂದರ ಮೇಲೆ ಇನ್ನೊಂದು ಅವಲಂಬಿತವಾಗಿರುವುದರಿಂದ ಮತ್ತು ಪ್ರಕರಣದ ವಸ್ತುಸ್ಥಿತಿಗಳ ಮತ್ತು ವಾಕ್ಯಗಳ

ಪುನರಾವರ್ತನೆಯನ್ನು ತಪ್ಪಿಸುವುದಕ್ಕಾಗಿ, ಈ ಎಲ್ಲಾ ಅಂಶಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

9. ಆರೋಪಿ ಮತ್ತು ಫಿರ್ಯಾದುದಾರರು ಪರಸ್ಪರ ಪರಿಚಿತರಾಗಿದ್ದು, ದಿನಾಂಕ 05/03/2022 ರಂದು 2,10,000/- ರೂಗಳನ್ನು 3 ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ಹೇಳಿ, 2,10,000/- ರೂಗಳನ್ನು ಫಿರ್ಯಾದಿಯಿಂದ ನಗದಾಗಿ ಸಾಲ ಪಡೆದುಕೊಂಡಿದ್ದು, ಸದರಿ ಹಣದ ಮರುಪಾವತಿ ಬಾಬತ್ತು ನಿ.ಪಿ-1 ರ ಚೆಕ್ಕನ್ನು, ದಿನಾಂಕ 04/07/2022 ರಂದು ನಗದಾಗುವಂತೆ ಫಿರ್ಯಾದಿಯ ಪರವಾಗಿ ನೀಡಿರುತ್ತಾನೆ. ಸದರಿ ಚೆಕ್ಕನ್ನು ಫಿರ್ಯಾದಿಯು ನಗದೀಕರಣಕ್ಕಾಗಿ ಹಾಜರುಪಡಿಸಿದಾಗ, ಆರೋಪಿತನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬುದಾಗಿ ಸದರಿ ಚೆಕ್ಕು ಅನಾದರಣಗೊಂಡಿರುತ್ತದೆ. ಈ ಕುರಿತಂತೆ ದಿನಾಂಕ 05/07/2022 ರಂದು ಆರೋಪಿತನಿಗೆ ನೋಟೀಸನ್ನು ನೀಡಿ, ಚೆಕ್ಕಿನ ಹಣವನ್ನು ಮರುಪಾವತಿ ಮಾಡುವಂತೆ ಒತ್ತಾಯಪಡಿಸಿದ್ದು, ಸದರಿ ನೋಟೀಸು ಆರೋಪಿತನಿಗೆ ದಿನಾಂಕ 07/07/2022 ರಂದು ಜಾರಿಯಾಗಿದ್ದರೂ ಸಹ, ಸದರಿ ನೋಟೀಸಿಗೆ ಆರೋಪಿತನು ಯಾವುದೇ ಉತ್ತರವನ್ನು ನೀಡಿಲ್ಲ ಹಾಗೂ ಚೆಕ್ಕಿನಲ್ಲಿ ಹೇಳಿದ ಹಣವನ್ನು ಫಿರ್ಯಾದಿಗೆ ಮರುಪಾವತಿ ಮಾಡಿಲ್ಲ ಎಂಬುದಾಗಿ ಸಿ.ಡಬ್ಲ್ಯೂ-1 ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯವನ್ನು ನುಡಿದು, ನಿ.ಪಿ-1 ರಿಂದ 5 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡು, ತನ್ನ ದೂರಿಗೆ

ಅನುಗುಣವಾಗಿ ಫಿರ್ಯಾದಿಯು ಪ್ರಮಾಣಪೂರ್ವಕವಾಗಿ ಸಾಕ್ಷಿ ನುಡಿದಿರುತ್ತಾರೆ. ಸದರಿ ದೂರಿನಲ್ಲಿ ಹೇಳಿದ ಸಂಗತಿಗಳನ್ನು ಆರೋಪಿತನು ನಿರ್ದಿಷ್ಟವಾಗಿ ಅಲ್ಲಗಳೆದಿರುತ್ತಾನೆ.

10. ಫಿರ್ಯಾದಿ ಪರ ವಕೀಲರ ವಾದಮಂಡನೆಯಲ್ಲಿ, ಆರೋಪಿತನು ತನ್ನ ಗೃಹಕೃತ್ಯದ ಅಡಚಣೆಗಾಗಿ 2,10,000/- ರೂಗಳನ್ನು ದಿನಾಂಕ 05/03/2022 ರಂದು 3 ತಿಂಗಳ ಒಳಗಾಗಿ ಮರುಪಾವತಿ ಮಾಡಲು ಒಪ್ಪಿ ಸಾಲವನ್ನು ಪಡೆದುಕೊಂಡಿದ್ದು, ಸದರಿ ಸಾಲದ ತೀರವಳಿಗಾಗಿ 04/07/2022 ರಂದು ನಿ.ಪಿ-1 ರ ಚೆಕ್ಕನ್ನು ಆರೋಪಿತನು ನೀಡಿದ್ದು, ಸದರಿ ಚೆಕ್ಕು ಆರೋಪಿತನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬುದಾಗಿ ಅನಾದರಣಗೊಂಡಿರುತ್ತದೆ. ಸದರಿ ಸಂಗತಿಯನ್ನು ಆರೋಪಿತನಿಗೆ ಫಿರ್ಯಾದಿಯು ನಿ.ಪಿ-3 ರ ನೋಟೀಸಿನಂತೆ ತಿಳಿಸಿದ್ದರೂ ಸಹ, ಸದರಿ ಆರೋಪಿತನು ನಿ.ಪಿ-3 ರ ನೋಟೀಸಿಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ.

11. ಅದೇ ರೀತಿಯಾಗಿ, ಸದರಿ ಆರೋಪಿತನು ನ್ಯಾಯಾಲಯದ ಮುಂದೆ ಹಾಜರಾಗಿ, ಫಿರ್ಯಾದಿಯ ಆರ್ಥಿಕ ಸಾಮರ್ಥ್ಯವನ್ನು ಪ್ರಶ್ನಿಸಿರುತ್ತಾನೆ. ಅದೇ ರೀತಿಯಾಗಿ, ದಿನಾಂಕ 05/06/2013 ರಂದು 50,000/- ರೂಗಳ ಸಾಲವನ್ನು ಫಿರ್ಯಾದಿಯಿಂದ ಆರೋಪಿತನು ಪಡೆದು ಆ ಹಣದ ಭದ್ರತೆಗಾಗಿ, ನಿ.ಪಿ-1 ರ ಚೆಕ್ಕನ್ನು ನೀಡಿದ್ದು, ನಂತರ ಸದರಿ ಹಣವನ್ನು ಬಡ್ಡಿ ಸಹಿತ ಮರುಪಾವತಿ ಮಾಡಿದ್ದೇನೆ ಎಂಬುದಾಗಿ ಸುಳ್ಳು ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾನೆ. ಈ ಕುರಿತಂತೆ, ಸದರಿ ಆರೋಪಿತನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅದೇ ರೀತಿಯಾಗಿ, ಸದರಿ ಆರೋಪಿತನು

ಫಿರ್ಯಾದಿಯಿಂದ ಸಾಲವನ್ನು ಪಡೆದಿರುವುದನ್ನು ಹಾಗೂ ಮುಕ್ತ ಸಮ್ಮತಿಯಿಂದ ನಿ.ಪಿ–1 ರ ಚೆಕ್ಕನ್ನು ಬರೆದುಕೊಟ್ಟಿರುವುದನ್ನು ಒಪ್ಪಿಕೊಂಡಿರುವುದರಿಂದ ಫಿರ್ಯಾದಿಯು ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆಯಡಿಯಲ್ಲಿನ ಆರೋಪಕ್ಕಾಗಿ ಅಗತ್ಯವಿರುವ ಎಲ್ಲಾ ಅಂಶಗಳನ್ನು ಸಾಬೀತುಪಡಿಸಿರುತ್ತಾನೆ. ಆದ್ದರಿಂದ, ಆರೋಪಿತನನ್ನು ಶಿಕ್ಷೆಗೆ ಗುರಿಪಡಿಸಿ, ಫಿರ್ಯಾದಿಗೆ ಪರಿಹಾರವನ್ನು ಕೊಡಿಸಬೇಕೆಂದು ಸಾಧನೆ ಮಾಡಿರುತ್ತಾರೆ.

12. ಆರೋಪಿ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ, ಸದರಿ ಫಿರ್ಯಾದುದಾರರು ಮೊದಲನೆಯದಾಗಿ ತಮ್ಮ ಆರ್ಥಿಕ ಸಾಮರ್ಥ್ಯವನ್ನು ಸಾಬೀತುಪಡಿಸಿರುವುದಿಲ್ಲ. ಅದೇ ರೀತಿಯಾಗಿ, ಮುಖ್ಯ ವಿಚಾರಣೆ ಹಾಗೂ ಪಾಟೀ ಸವಾಲಿನಲ್ಲಿ ದ್ವಂದ್ವ ಹೇಳಿಕೆಗಳನ್ನು ನೀಡಿರುತ್ತಾರೆ. ತನ್ನ ಆರ್ಥಿಕ ಸಾಮರ್ಥ್ಯದ ಕುರಿತು, ಫಿರ್ಯಾದಿಯು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. 2013 ನೇ ಸಾಲಿನಲ್ಲಿ, ಫಿರ್ಯಾದಿಯಿಂದ ಆರೋಪಿತನು 50,000/– ರೂಗಳ ಸಾಲವನ್ನು ಪಡೆದುಕೊಂಡಿದ್ದು, ಆ ಹಣವನ್ನು ಬಡ್ಡಿ ಸಹಿತ ದಿನಾಂಕ 05/06/2016 ರಂದು ಮರುಪಾವತಿ ಮಾಡಿದ್ದು, ನಂತರ ಚೆಕ್ಕನ್ನು ವಾಪಸ್ಸು ಕೊಡುವಂತೆ ಕೇಳಿದಾಗ, ಸದರಿ ಚೆಕ್ಕು ಕಳೆದು ಹೋಗಿದ್ದು, ಹುಡುಕಿ ಕೊಡುವುದಾಗಿ ತಿಳಿಸಿದ್ದರೂ ಸಹ, ಸದರಿ ಆರೋಪಿತನು ಭದ್ರತೆಗಾಗಿ 2013 ರಲ್ಲಿ ನೀಡಿದ್ದ ಚೆಕ್ಕನ್ನು, ಫಿರ್ಯಾದಿಯು ವಾಪಸ್ಸು ನೀಡಿರುವುದಿಲ್ಲ. 2019 ರಿಂದ 2022 ರವರೆಗೆ ಕೋವಿಡ್ ಸಾಂಕ್ರಾಮಿಕ ಕಾಯಿಲೆ ಇದ್ದ ಕಾರಣ, ಫಿರ್ಯಾದಿಯನ್ನು ತಾನು ಭೇಟಿಯಾಗಲು ಸಾಧ್ಯವಾಗದ ಕಾರಣ, ನಿ.ಪಿ–1 ರ ಚೆಕ್ಕನ್ನು ಅಕ್ರಮವಾಗಿ ಭರ್ತಿ

ಮಾಡಿಕೊಂಡು, ಅವಧಿ ಗತಿಸಿದ ಚೆಕ್ಕಿನಲ್ಲಿ ಬರವಣಿಗೆ ಮಾಡಿಸಿ, ಅದನ್ನು ಬ್ಯಾಂಕಿನಿಂದ ಅನಾಧರಣವಾಗುವಂತೆ ಮಾಡಿಕೊಂಡು ಸದರಿ ಚೆಕ್ಕಿನ ಆಧಾರದ ಮೇಲೆ ಈ ಪ್ರಕರಣವನ್ನು ದಾಖಲು ಮಾಡಿರುತ್ತಾನೆ.

13. ಅದೇ ರೀತಿಯಾಗಿ, 2022 ಜನವರಿ ತಿಂಗಳಿನಲ್ಲಿ ಫಿರ್ಯಾದಿಯು ಆರೋಪಿತನು ಬಿದ್ದು ಗಾಯ ಮಾಡಿಕೊಂಡು, ನಂತರ ಭಾಗವತ್ ಆಸ್ಪತ್ರೆ, ಸಾಗರ ಇಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿ, ದಿನಾಂಕ 12/02/2022 ರಂದು 6 ವಾರಗಳವರೆಗೆ ವಿಶ್ರಾಂತಿ ಪಡೆಯಬೇಕೆಂದು ವೈದ್ಯರು ಸಲಹೆ ನೀಡಿದ್ದು, ಆ ಸಂದರ್ಭದಲ್ಲಿ ತಾನು ಮನೆಯಲ್ಲಿಯೇ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಆದರೂ ಸಹ, ಫಿರ್ಯಾದಿಯು ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ಈ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಆದ್ದರಿಂದ, ಸದರಿ ಆರೋಪಿತನು ಫಿರ್ಯಾದಿಯ ಪರವಾಗಿ ಇರುವಂತಹ ಕಾನೂನುಬದ್ಧ ಪೂರ್ವಭಾವನೆಯನ್ನು ಖಂಡಿಸಿರುತ್ತಾರೆ. ಆದಕಾರಣ, ಸದರಿ ಆರೋಪಿತನನ್ನು ನಿರ್ದೋಷಿ ಅಂತ ತೀರ್ಮಾನಿಸಿ ಬಿಡುಗಡೆ ಮಾಡಬೇಕೆಂದು ಸಾಧನೆ ಮಾಡಿರುತ್ತಾರೆ. ನಂತರ, ಸದರಿ ಆರೋಪಿತನು ತನ್ನ ಪ್ರತಿರಕ್ಷಣೆಗೆ ಪೂರಕವಾಗಿ ಗೌರವಾನ್ವಿತ ಸಾಂವಿಧಾನಿಕ ನ್ಯಾಯಾಲಯಗಳ ಈ ಕೆಳಕಂಡ 12 ತೀರ್ಪುಗಳನ್ನು ಉಲ್ಲೇಖಿಸಿರುತ್ತಾರೆ.

1. AIR 2006 Online SC 402
2. 2024(ii) KCCR 2198
3. 2023(1) KCCR 83

4. 2015(2) DCR 737

5. 2025(1) KCCR 194

6. 2024(1) KCCR 166

7. 2012(1) DCR 385

8. ILR 2007 KAR 2709

9. 2020(1) DCR 436

10. 2019(3) KCCR 2473 (SC)

11. 2009(2) DCR 610

12. 2009(2) DCR Page 153.

ನಿ.ಪಿ-1 ರ ಚೆಕ್ಕು ಆರೋಪಿತನ ಖಾತೆಗೆ ಸಂಬಂಧಪಟ್ಟ ಶಿವಮೊಗ್ಗ ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಸೆಂಟ್ರಲ್ ಬ್ಯಾಂಕ್, ಸಾಗರ ಶಾಖೆಯ ಆರೋಪಿತನ ಖಾತೆಗೆ ಸಂಬಂಧಪಟ್ಟ ಚೆಕ್ ಆಗಿದ್ದು, ಅದನ್ನು ದಿನಾಂಕ 04/07/2022 ರಂದು ನಗದಾಗುವಂತೆ ಆರೋಪಿತನು ಫಿರ್ಯಾದಿಯಿಂದ ಪಡೆದುಕೊಂಡಿದ್ದ 2,10,000/- ರೂಗಳ ಮರುಪಾವತಿಗಾಗಿ ನೀಡಿದ್ದಾನೆ ಎಂಬುದಾಗಿ, ಸದರಿ ಫಿರ್ಯಾದಿಯು ತನ್ನ ದೂರು ಹಾಗೂ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿದ್ದಾರೆ. ಸದರಿ ಚೆಕ್ಕಿನಲ್ಲಿರುವ ಆರೋಪಿತನ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಗಿರುತ್ತದೆ. ನಿ.ಪಿ-2 ಶಿವಮೊಗ್ಗ ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್‌ನ ಹಿಂಬರಹವಾಗಿದ್ದು, ನಿ.ಪಿ-1 ರ ಚೆಕ್ಕನ್ನು ಆರೋಪಿತನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ

ಎಂಬ ಕಾರಣಕ್ಕಾಗಿ, ದಿನಾಂಕ 04/07/2022 ರಂದು ಅನಾಧರಣಗೊಳಿಸಿ, ಸದರಿ ಚೆಕ್ಕನ್ನು ಫಿರ್ಯಾದಿಗೆ ವಾಪಸ್ಸು ನೀಡಿರುತ್ತಾರೆ. ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆಯ ಕಲಂ 138(A) ನ ಅಡಿಯಲ್ಲಿ ಸದರಿ ನಿ.ಪಿ-1 ರ ಚೆಕ್ಕನ್ನು ನಿಗದಿತ ಕಾಲಾವಧಿಯಲ್ಲಿ ಬ್ಯಾಂಕಿಗೆ ನಗದೀಕರಣಕ್ಕಾಗಿ ಹಾಜರುಪಡಿಸಬೇಕಾಗುತ್ತದೆ. ಸದರಿ ಚೆಕ್ಕನ್ನು ದಿನಾಂಕ 04/07/2022 ರಂದು ಅಂದರೆ, ಚೆಕ್ಕಿನಲ್ಲಿ ನಮೂದಿಸಿದ ದಿನದಂದೇ ಫಿರ್ಯಾದಿಯು ಬ್ಯಾಂಕಿಗೆ ಹಾಜರುಪಡಿಸಿರುತ್ತಾರೆ. ಆದ್ದರಿಂದ, ಸದರಿ ಕಾಯಿದೆಯ ಕಲಂ 138(A) ನ ಅಡಿಯಲ್ಲಿನ ಅವಶ್ಯಕತೆಯನ್ನು ಫಿರ್ಯಾದುದಾರರು ಪೂರೈಸಿರುತ್ತಾರೆ.

14. ಸದರಿ ಕಾಯಿದೆಯ ಕಲಂ 138(ಬಿ) ನ ಅಡಿಯಲ್ಲಿ ಚೆಕ್ಕು ಅನಾದರಣಗೊಂಡ ಕೂಡಲೇ 30 ದಿನಗಳ ಒಳಗಾಗಿ ಚೆಕ್ಕಿನ ಹಣವನ್ನು ಮರುಪಾವತಿ ಮಾಡುವಂತೆ ಸೂಚಿಸಿ, ಆರೋಪಿತನಿಗೆ ಫಿರ್ಯಾದಿಯು ನಿ.ಪಿ-3 ರಂತೆ ತಮ್ಮ ವಕೀಲರ ಮೂಲಕ ನೋಟೀಸನ್ನು ಕೊಡಿಸಿರುತ್ತಾರೆ. ನಿ.ಪಿ-4 ಅಂಚೆ ರಸೀದಿಯಾಗಿದ್ದು, ದಿನಾಂಕ 05/07/2022 ರಂದು ಆರೋಪಿತನಿಗೆ ಲೀಗಲ್ ನೋಟೀಸನ್ನು ನೀಡಿರುವುದಾಗಿ ಕಂಡುಬರುತ್ತದೆ. ನಿ.ಪಿ-5 ರಂತೆ ಆರೋಪಿತನಿಗೆ ನಿ.ಪಿ-3 ರ ನೋಟೀಸು ಜಾರಿಯಾಗಿರುತ್ತದೆ. ಸದರಿ ನೋಟೀಸಿಗೆ ಆರೋಪಿತನು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಅಲ್ಲದೆ, ನಿ.ಪಿ-3 ರಲ್ಲಿ ಸೂಚಿಸಿದಂತೆ ನಿಗದಿತ ಅವಧಿಯಲ್ಲಿ ಆರೋಪಿತನು ಚೆಕ್ಕಿನ ಹಣವನ್ನು ಫಿರ್ಯಾದಿಗೆ ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ, ಸದರಿ ನೋಟೀಸನ್ನು ನೀಡಿದ ನಂತರ, ನಿಗದಿತ ಕಾಲಾವಧಿಯಲ್ಲಿ ಫಿರ್ಯಾದಿಯು ಪ್ರಸ್ತುತ ದೂರನ್ನು ನ್ಯಾಯಾಲಯಕ್ಕೆ

ಸಲ್ಲಿಸಿರುತ್ತಾರೆ. ಆದ್ದರಿಂದ, ಸದರಿ ಫಿರ್ಯಾದಿಯು ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆಯ ಕಲಂ 138 ರ ಅಡಿಯಲ್ಲಿನ ಎಲ್ಲಾ ಅಗತ್ಯತೆಗಳನ್ನು ಪೂರೈಸಿರುವುದರಿಂದ ಮತ್ತು ಸದರಿ ದೂರನ್ನು ಕಾಯಿದೆಯು ಅಗತ್ಯಪಡಿಸಿದಂತೆ ಹಾಜರುಪಡಿಸಿಲ್ಲ ಎಂಬುದಾಗಿ ಆರೋಪಿತನು ಯಾವುದೇ ಪ್ರತಿರಕ್ಷೆಯನ್ನು ತೆಗೆದುಕೊಳ್ಳದೆ ಇರುವುದರಿಂದ ಹಾಗೂ ಸದರಿ ಕಾಯಿದೆಯ ಕಲಂ 139 ಮತ್ತು 118(ಎ) ನಂತೆ ಪ್ರತಿಯೊಂದು ಲಿಖಿತ ಪತ್ರವೂ ಪ್ರತಿಫಲಕ್ಕಾಗಿ ನೀಡಿರುತ್ತಾರೆ ಎಂಬುದಾಗಿ ಪೂರ್ವಭಾವನೆ ಮಾಡಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಆರೋಪಿತನೂ ಸಹ ನಿ.ಪಿ-1 ರ ಚೆಕ್ಕನ್ನು ಫಿರ್ಯಾದಿಯ ಪರವಾಗಿ 2013 ರಲ್ಲಿ ನೀಡಿದ್ದೆ ಎಂಬುದಾಗಿ ಒಪ್ಪಿಕೊಂಡಿರುವುದರಿಂದ, ಫಿರ್ಯಾದಿಯ ಪರವಾಗಿ ಕಾನೂನಾತ್ಮಕವಾಗಿ ಪೂರ್ವಾಭಾವನೆಯನ್ನು ಮಾಡಬಹುದಾಗಿರುತ್ತದೆ.

15. ಸಿ.ಡಬ್ಲ್ಯೂ-1 ರವರು ತಮ್ಮ ಮೌಖಿಕ ಸಾಕ್ಷಿಯ ಸಮರ್ಥನೆಗಾಗಿ ಹಾಜರುಪಡಿಸಿರುವ ನಿ.ಪಿ-1 ರ ಚೆಕ್ಕನ್ನು ಆರೋಪಿತನು ಫಿರ್ಯಾದಿಯ ಪರವಾಗಿ 2013 ರಲ್ಲಿ ನೀಡಿದ್ದೇನೆ ಎಂಬುದಾಗಿ ಸ್ವತಃ ತಮ್ಮ ಮುಖ್ಯ ವಿಚಾರಣೆ ಹಾಗೂ ಫಿರ್ಯಾದುದಾರರ ಪಾಟೀ ಸವಾಲಿನಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿರುವುದರಿಂದ ಹಾಗೂ ನಿ.ಪಿ-1 ರ ಚೆಕ್ಕಿನಲ್ಲಿನ ಸಹಿಯು ಆರೋಪಿತನು ಬ್ಯಾಂಕಿನಲ್ಲಿ ನೀಡಿದ ಮಾದರಿ ಸಹಿಗೆ ತಾಳೆಯಾಗುವುದಿಲ್ಲ ಎಂಬ ಕಾರಣಕ್ಕಾಗಿ ಅನಾಧರಣಗೊಳ್ಳದೆ ಇರುವುದರಿಂದ, ಸದರಿ ಚೆಕ್ಕನ್ನು ಆರೋಪಿತನು ಮುಕ್ತ ಸಮ್ಮತಿಯಿಂದ ಫಿರ್ಯಾದಿಯ ಪರವಾಗಿ ನೀಡಿದ್ದಾನೆ ಎಂಬುದಾಗಿ ಕಂಡುಬರುತ್ತದೆ. ಅದು ಅಲ್ಲದೆ, ಆರೋಪಿತನು ಫಿರ್ಯಾದಿಯಿಂದ 50,000/- ರೂಗಳ ಸಾಲವನ್ನು

ಪಡೆದುಕೊಂಡಿದ್ದೆ ಎಂಬುದನ್ನು ಒಪ್ಪಿಕೊಂಡಿರುವುದರಿಂದ, ಸದರಿ ಆರೋಪಿತನು ದೂರಿನಲ್ಲಿ ಹೇಳಿದ ಭಾಗಶಃ ಮೊತ್ತವನ್ನು ಒಪ್ಪಿಕೊಂಡಿರುತ್ತಾನೆ.

16. ಈ ಸಂದರ್ಭದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಧಾರಿತ ಪ್ರಕರಣವಾದ 2013 AIR Criminal 96, 2013(3)SCC 86 ಪ್ರಕರಣದಲ್ಲಿ,

> **"drawer of the dishonored cheque having once admitted his signature on the cheque- it was not available to him to deny the fact that, he had not issued cheque in favor of the complainant for once the signature on the cheque is admitted and the same had been returned on account of insufficient funds-offence U/sec.138 of N.I.Act the will clearly be held to have been made out and it was not open for the respondent drawer to urge that, all though the cheque had been dishonored, no offense under the act is made out.**

ಮತ್ತೊಂದು ನಿರ್ಧರಿತ ಪ್ರಕರಣವಾದ Criminal Appeal No.123/2021 M/s Kalamani Tex Vs. Balsubraymaniam ನಲ್ಲಿ,

even a blank cheque leaf, voluntarily signed and handed over by the accused, which is towards some payment, would attract presumption U/sec.139 of N.I.Act in the absence of any cogent evidence to show that, the cheque was not issued in discharge of a debt.

ಹಾಗೂ

Criminal Appeal No.1269-1270/2021 between Shripathising (D) Vs. State of Jarkhand ನಲ್ಲಿ the dishonors of cheque issued had a security can also attract an offense punishable U/sec.138 of N.I.Act. There cannot be a hard and fast rule that a cheque which is issued as security can never be presented by the drawer of the cheque, the court added that such contention would arise only in a circumstances were the debt has not become recoverable and the cheque issued as security has not matured to be presented for recovery of the

amount, if the due date agreed for payment of debt has not arrived"

ಎಂಬುದಾಗಿ ಅಭಿಪ್ರಾಯಪಟ್ಟಿರುತ್ತದೆ. ಆದ್ದರಿಂದ, ಮೇಲಿನ ನಿರ್ಧರಿತ ಪ್ರಕರಣಗಳ ಸಂಗತಿಗಳನ್ನು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸಿದಾಗ, ಆರೋಪಿತನು 2,10,000/- ರೂಗಳನ್ನು ನಗದು ರೂಪದಲ್ಲಿ ಫಿರ್ಯಾದಿಯಿಂದ ಪಡೆದುಕೊಂಡಿದ್ದಾನೆ ಎಂಬುದು ಕಂಡುಬರುತ್ತದೆ. ಸದರಿ ನಿ.ಪಿ-1 ರ ಚೆಕ್ಕನ್ನು ಮುಕ್ತ ಸಮ್ಮತಿಯಿಂದ ಫಿರ್ಯಾದಿಗೆ ನೀಡಿರುವುದನ್ನು ಆರೋಪಿತನು ಒಪ್ಪಿಕೊಂಡಿರುವುದರಿಂದ, ಸದರಿ ಫಿರ್ಯಾದಿಗೆ ಕಾನೂನಾತ್ಮಕವಾಗಿ ಮರುಪಾವತಿ ಮಾಡಬೇಕಾದ ಹಣದ ಬಾಧ್ಯತೆಯ ತೀರವಳಿಗಾಗಿ ನಿ.ಪಿ-1 ರ ಚೆಕ್ಕನ್ನು ಆರೋಪಿತನು ಮುಕ್ತ ಸಮ್ಮತಿಯಿಂದ ಫಿರ್ಯಾದಿಗೆ ನೀಡಿದ್ದಾನೆ ಎನ್ನುವ ಪೂರ್ವಭಾವನೆಗೆ ಈ ಹಿನ್ನೆಲೆಯು ಬಂದಿರುತ್ತದೆ.

17. ಆರೋಪಿತನು ತನ್ನ ಪ್ರತಿರಕ್ಷೆಯಲ್ಲಿ ದೂರಿನಲ್ಲಿನ ಎಲ್ಲಾ ಸಂಗತಿಗಳನ್ನು ನಿರ್ದಿಷ್ಟವಾಗಿ ಅಲ್ಲಗಳೆದಿರುತ್ತಾನೆ. ಮುಂದುವರೆದು, ನಿ.ಪಿ-1 ರ ಚೆಕ್ಕಿನಲ್ಲಿ ಇರುವ ಸಹಿಯು ಮಾತ್ರ ತನ್ನದಾಗಿದ್ದು, ಉಳಿದ ಬರವಣಿಗೆಯನ್ನು ತಾನು ಮಾಡಿರುವುದಿಲ್ಲ ಎಂಬುದಾಗಿ ಹೇಳಿದ್ದಾರೆ. ಈ ಸಂದರ್ಭದಲ್ಲಿ, ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆಯ ಕಲಂ 20 ನ್ನು ನೋಡುವುದು ಅಗತ್ಯ. ಸದರಿ ಕಲಂ 20 ಮುದ್ರೆಯೊತ್ತಿದ ಅಪೂರ್ಣ ಲಿಖಿತ ಪತ್ರ ದ ಕುರಿತು ವಿವರಿಸುತ್ತದೆ.

ಸದರಿ ಕಲಂನಂತೆ, **ವರ್ಗಾವಣೆಯ ಲಿಖಿತ ಪತ್ರದ ಕಾನೂನಿನಂತೆ ಒಬ್ಬ ವ್ಯಕ್ತಿ ಸಹಿ ಮಾಡಿ, ಮತ್ತೊಬ್ಬನಿಗೆ ನೀಡಿದ್ದರೆ, ಲಿಖಿತ ಪತ್ರದಲ್ಲಿ ಸಂಪೂರ್ಣ ಖಾಲಿ ಬಿಟ್ಟಿದ್ದರೆ ಅಥವಾ ಒಂದು ಅಪೂರ್ಣ ವರ್ಗಾವಣೆಯ ಲಿಖಿತ ಪತ್ರದ ಮೇಲೆ ಬರೆದಿದ್ದರೆ, ಆದ್ದರಿಂದ ಆತ ಧಾರಕನಿಗೆ ಪೂರ್ಣಗೊಳಿಸುವ ಅಧಿಕಾರವನ್ನು ಕೊಟ್ಟಂತೆ**.

ಈ ಪ್ರಕರಣದಲ್ಲಿಯೂ ಸಹ, ಫಿರ್ಯಾದಿಗೆ ನಿ.ಪಿ-1 ರ ಚೆಕ್ಕನ್ನು ಆರೋಪಿತನು ನೀಡಿರುವುದನ್ನು ಹಾಗೂ ಸದರಿ ಚೆಕ್ಕಿನಲ್ಲಿನ ತನ್ನ ಸಹಿಯನ್ನು ಅಲ್ಲಗಳೆಯದೆ ಇರುವುದರಿಂದ, ಸದರಿ ಚೆಕ್ಕಿನಲ್ಲಿನ ಇತರೆ ಬರವಣಿಗೆಗೆ ಯಾವುದೇ ಮಹತ್ವ ಇರುವುದಿಲ್ಲ. ಆದ್ದರಿಂದ, ಸದರಿ ಪ್ರತಿರಕ್ಷೆಯು ಆರೋಪಿತನಿಗೆ ಸಹಾಯವಾಗುವುದಿಲ್ಲ.

18. ಆರೋಪಿತನ ಮತ್ತೊಂದು ಪ್ರಮುಖ ಪ್ರತಿರಕ್ಷೆಯೇನೆಂದರೆ, ದಿನಾಂಕ 05/06/2013 ರಂದು ಫಿರ್ಯಾದಿಯಿಂದ 50,000/- ರೂಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಸಾಲದ ಭದ್ರತೆಗಾಗಿ ನಿ.ಪಿ-1 ರ ಖಾಲಿ ಚೆಕ್ಕನ್ನು ಆರೋಪಿತನಿಂದ ಫಿರ್ಯಾದಿಯು ಪಡೆದುಕೊಂಡಿರುತ್ತಾನೆ. ನಂತರ, ಸದರಿ ಸಾಲವನ್ನು ತಾನು ಬಡ್ಡಿ ಸಹಿತ 75,000/- ರೂಗಳನ್ನು ದಿನಾಂಕ 05/06/2016 ರಂದು ಮರುಪಾವತಿ ಮಾಡಿರುತ್ತೇನೆ ಎಂದು ಹೇಳಿದ್ದಾರೆ. ಈ ಕುರಿತಂತೆ, ಸದರಿ ಆರೋಪಿತನು ದಿನಾಂಕ 05/06/2013 ರಂದು 50,000/- ರೂಗಳನ್ನು ಸಾಲ ಪಡೆದುಕೊಂಡ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ತದನಂತರ, ಸುಮಾರು 3 ವರ್ಷಗಳು ಕಳೆದ ಬಳಿಕ ಅಂದರೆ 05/06/2013 ರಿಂದ 05/06/2016 ರವರೆಗೆ ಆರೋಪಿತನು ಫಿರ್ಯಾದಿಗೆ ಯಾವುದೇ ಬಡ್ಡಿಯನ್ನು ಕಾಲಕಾಲಕ್ಕೆ ಪಾವತಿ ಮಾಡಿರುವುದಿಲ್ಲ. ಆರೋಪಿತನು ಸ್ವತಃ

ಒಪ್ಪಿಕೊಂಡಂತೆ ದಿನಾಂಕ 05/06/2016 ರಂದು, 75,000/- ರೂಗಳನ್ನು (ಬಡ್ಡಿಯೊಂದಿಗೆ) ಫಿರ್ಯಾದಿಗೆ ಮರುಪಾವತಿ ಮಾಡಿದ್ದಾರೆ. ಸದರಿ ಹಣವನ್ನು ಮರುಪಾವತಿ ಮಾಡಿದ ಬಗ್ಗೆ, ಆರೋಪಿತನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

19. ಮೇಲಿನಂತೆ ದಿನಾಂಕ 05/06/2016 ರಂದು, ಆರೋಪಿತನು ಫಿರ್ಯಾದಿಗೆ 75,000/- ರೂಗಳನ್ನು ಮರುಪಾವತಿ ಮಾಡಿದ ಕೂಡಲೇ ಭದ್ರತೆಗಾಗಿ ನೀಡಿದ್ದ ಚೆಕ್ಕನ್ನು ವಾಪಸ್ಸು ಕೊಡುವಂತೆ ಕೇಳಿದ್ದಾನೆ. ಆನಂತರ, ಸದರಿ ಚೆಕ್ಕನ್ನು ಹುಡುಕಿ ಕೊಡುವುದಾಗಿ ಫಿರ್ಯಾದಿಯು ಹೇಳಿದ್ದು, ನಂತರ ಆರೋಪಿತನು 4-5 ಬಾರಿ ಚೆಕ್ಕನ್ನು ವಾಪಸ್ಸು ಕೊಡಲು ಕೇಳಿಕೊಂಡರೂ ಸಹ, ಫಿರ್ಯಾದಿಯು ಸದರಿ ಚೆಕ್ಕನ್ನು ವಾಪಸ್ಸು ನೀಡಿರುವುದಿಲ್ಲ. ಸದರಿ ಆರೋಪಿತನು ಯಾವ ದಿನಾಂಕದಂದು ಫಿರ್ಯಾದಿಗೆ ಚೆಕ್ಕನ್ನು ವಾಪಸ್ಸು ಕೊಡುವಂತೆ ಕೇಳಿದ್ದನು ಎಂಬುದಾಗಿ ಹೇಳಿರುವುದಿಲ್ಲ. ಅದೇ ರೀತಿಯಾಗಿ, ದಿನಾಂಕ 05/06/2016 ರಂದು ಪ್ರಸ್ತುತ ಪ್ರಕರಣದ ಆರೋಪಿತನು ಫಿರ್ಯಾದಿಗೆ ಬಡ್ಡಿ ಸಹಿತ 75,000/- ರೂಗಳನ್ನು ಮರುಪಾವತಿ ಮಾಡಿದ್ದರೂ ಸಹ, 2022 ನೇ ಸಾಲಿನಲ್ಲಿ ಈ ಪ್ರಕರಣವನ್ನು ದಾಖಲಿಸುವವರೆಗೆ ಅಂದರೆ, ಸುಮಾರು 6 ವರ್ಷಗಳವರೆಗೆ ತಾನು ಸಾಲವನ್ನು ಫಿರ್ಯಾದಿಗೆ ಮರುಪಾವತಿ ಮಾಡಿದ್ದರೂ ಸಹ, ತನ್ನ ಚೆಕ್ಕನ್ನು ವಾಪಸ್ಸು ನೀಡುವಂತೆ ಕೇಳಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅದೇ ರೀತಿಯಾಗಿ, ತಾನು ಸಾಲ ಮರುಪಾವತಿ ಮಾಡಿದ 6 ವರ್ಷಗಳ ನಂತರವೂ ಸಹ

ಫಿರ್ಯಾದಿಯು ಚೆಕ್ಕನ್ನು ವಾಪಸ್ಸು ನೀಡದೆ ಇದ್ದ ಬಗ್ಗೆ, ಆರೋಪಿತನು ಯಾವುದೇ ಕಾನೂನು ಕ್ರಮವನ್ನು ಫಿರ್ಯಾದಿಯ ವಿರುದ್ಧ ತೆಗೆದುಕೊಂಡಿರುವುದಿಲ್ಲ. ಅದೇ ರೀತಿಯಾಗಿ, ನಿ.ಪಿ-1 ರ ಚೆಕ್ಕಿನ ಪಾವತಿಯ ತಡೆಹಿಡಿಯುವಂತೆ ಆರೋಪಿತನು ತನ್ನ ಬ್ಯಾಂಕಿಗೆ ಯಾವುದೇ ಲಿಖಿತ ಮನವಿ ಅಥವಾ ಮೌಖಿಕ ಮನವಿಯನ್ನು ಸಹ ಮಾಡಿರುವುದಿಲ್ಲ. ಸದರಿ ಆರೋಪಿತನು ತನ್ನ ಮುಖ್ಯ ವಿಚಾರಣಾ ಸಾಕ್ಷಿಯಲ್ಲಿ ತೆಗೆದುಕೊಂಡ ಪ್ರತಿರಕ್ಷೆಗೆ ಪೂರಕವಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಸದರಿ ಆರೋಪಿತನ ಪ್ರತಿರಕ್ಷೆಯನ್ನು ಒಪ್ಪಿಕೊಳ್ಳಲು ಆಗುವುದಿಲ್ಲ.

20. ಆರೋಪಿತನು ತನ್ನ ಮುಖ್ಯ ವಿಚಾರಣೆ ಹೇಳಿಕೆಯಲ್ಲಿ, ಫಿರ್ಯಾದಿಯು 2013 ರಲ್ಲಿ ಆರೋಪಿತನು ಭದ್ರತೆಗಾಗಿ ನೀಡಿದ್ದ ಚೆಕ್ಕನ್ನು ಅವಧಿ ಮುಗಿದ ನಂತರ ಬ್ಯಾಂಕಿಗೆ ಹಾಜರುಪಡಿಸಿ, ಅನಾಧರಣೆ ಮಾಡಿಕೊಂಡು ಈ ಪ್ರಕರಣವನ್ನು ದಾಖಲು ಮಾಡಿದ್ದಾರೆ ಎಂಬುದಾಗಿ ಹೇಳಿದ್ದಾರೆ. ಆದರೆ, 2013 ನೇ ಸಾಲಿನಲ್ಲಿ ಆರೋಪಿತನು ನಿ.ಪಿ-1 ರ ಚೆಕ್ಕನ್ನು ಫಿರ್ಯಾದಿಯ ಪರವಾಗಿ ನೀಡಿದ್ದನು ಎನ್ನುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಅದೇ ರೀತಿಯಾಗಿ, ಸದರಿ ಆರೋಪಿತನು ಹಾಜರುಪಡಿಸಿರುವ ನಿ.ಡಿ 1 ರಿಂದ 4 ರ ದಾಖಲೆಗಳು, ಆರೋಪಿತನು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆಯನ್ನು ಪಡೆದುಕೊಂಡ ಬಗೆಗಿನ ದಾಖಲೆಗಳಾಗಿರುತ್ತವೆ. ನಿ.ಡಿ 2 ರಂತೆ ದಿನಾಂಕ 12/02/2022 ರಂದು, ಆರೋಪಿತನು ಸಾಗರದ ಭಾಗವತ್ ಆಸ್ಪತ್ರೆಗೆ

ಒಳರೋಗಿಯಾಗಿ ದಾಖಲಾಗಿ 3 ದಿನಗಳವರೆಗೆ ಅಂದರೆ, ದಿನಾಂಕ 15/02/2022 ರವರೆಗೆ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆ. ಈ ಪ್ರಕರಣದಲ್ಲಿ ಫಿರ್ಯಾದಿಯು ಹೇಳುವಂತೆ, ದಿನಾಂಕ 05/03/2022 ರಂದು ಫಿರ್ಯಾದಿಯಿಂದ ಆರೋಪಿತನು 2,10,000/- ರೂಗಳ ಸಾಲವನ್ನು ಪಡೆದುಕೊಂಡಿರುತ್ತಾನೆ. ಆದಕಾರಣ, ಸದರಿ ನಿ.ಡಿ 2 ರಂತೆ ದಿನಾಂಕ 12/02/2022 ರಿಂದ 15/02/2022 ರವರೆಗೆ, ಆರೋಪಿತನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದರೂ ಸಹ, ಫಿರ್ಯಾದಿಯು ಸಾಲವನ್ನು ನೀಡಿದ್ದಾನೆ ಎನ್ನುವ ದಿನದಂದು ಆರೋಪಿತನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರುವುದಿಲ್ಲ. ನಿ.ಡಿ 4 ರಂತೆ, ದಿನಾಂಕ 12/02/2022 ರಿಂದ 6 ವಾರಗಳವರೆಗೆ ಆರೈಕೆಯಲ್ಲಿ ಇರಬೇಕು ಎಂದು ವೈದ್ಯರು ಆರೋಪಿತನಿಗೆ ಸಲಹೆ ನೀಡಿರುತ್ತಾರೆ. ಸದರಿ ದಿನದಂದು ಆರೋಪಿತನು ಫಿರ್ಯಾದಿಯ ಮನೆಗೆ ಹೋಗಿ ಹಣವನ್ನು ಪಡೆದಿಲ್ಲ ಎಂದು ನಂಬಲು ನಿ.ಡಿ 4 ರ ದಾಖಲೆಯು ಸೂಕ್ತ ದಾಖಲೆಯಾಗಿರುವುದಿಲ್ಲ. ಏಕೆಂದರೆ, ವೈದ್ಯರ ಸಲಹೆಯಂತೆ ವಾಸ್ತವವಾಗಿ ಆರೋಪಿತನು 6 ವಾರಗಳವರೆಗೆ ಮನೆಯಿಂದ ಹೊರ ಹೋಗದೆ ತನ್ನ ಮನೆಯಲ್ಲೇ ಉಳಿದುಕೊಂಡಿದ್ದ ಎನ್ನುವ ಕುರಿತು ಆರೋಪಿತನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

21. ಆರೋಪಿತನು ತನ್ನ ಆರ್ಥಿಕ ಸಾಮರ್ಥ್ಯ ಸುಸ್ಥಿತಿಯಲ್ಲಿ ಇತ್ತು ಎಂಬುದಾಗಿ ಹಾಗೂ ಫಿರ್ಯಾದಿಯಿಂದ ಯಾವುದೇ ಸಾಲವನ್ನು ಪಡೆಯುವ ಅಗತ್ಯ ತನಗೆ ಇರಲಿಲ್ಲ ಎಂಬುದಾಗಿ ಹೇಳಿದ್ದಾರೆ. ತನ್ನ ಆರ್ಥಿಕ ಸಾಮರ್ಥ್ಯವನ್ನು ತೋರಿಸುವ ಸಲುವಾಗಿ, ನಿ.ಡಿ 5

ರಂತೆ ಸಾಗರ ತಾಲೂಕು ಕಸಬಾ ಹೋಬಳಿ ತಪ್ಪಗೋಡು ಗ್ರಾಮದ ಸರ್ವೆ ನಂಬರ್ 22/5 ರ ಪಹಣಿ ಪತ್ರಿಕೆಯನ್ನು ಹಾಗೂ ಸಾಗರ ತಾಲೂಕು ಕಸಬಾ ಹೋಬಳಿ ಬರೂರು ಗ್ರಾಮದ ಸರ್ವೆ ನಂಬರ್ 76/2 ರ ಮತ್ತು 88/2 ರ 3 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಗಳು ದುರ್ಗಮ್ಮ ಕೋಂ ಹಾಲಗಳಲೆ ಚೌಡಪ್ಪ ಎನ್ನುವವರ ಮಾಲಿಕತ್ವದಲ್ಲಿ ಇರುವುದಾಗಿ ಕಂಡುಬರುತ್ತದೆ. ಸದರಿ ದುರ್ಗಮ್ಮ ಎಂದರೆ ಆರೋಪಿತನ ತಾಯಿ ಎಂಬುದಾಗಿ ಹೇಳಿದ್ದಾರೆ. ಆದರೆ, ನಿಡಿ.5 ರಿಂದ 7 ರ ಜಮೀನುಗಳಿಂದ ಆರೋಪಿತನಿಗೆ ಆದಾಯ ಬರುತ್ತಿದೆ ಎನ್ನುವ ಬಗ್ಗೆ ಸದರಿ ದಾಖಲೆಗಳಲ್ಲಿ ಯಾವುದೇ ಉಲ್ಲೇಖ ಇರುವುದಿಲ್ಲ. ಅದೇ ರೀತಿಯಾಗಿ, ಆರೋಪಿತನಲ್ಲದೆ ನಿಡಿ 1 ರಿಂದ 7 ರವರೆಗಿನ ದಾಖಲೆಗಳಲ್ಲಿ ಕಂಡ ಸ್ವತ್ತುಗಳಿಗೆ ಇತರೆ ಯಾರೆಲ್ಲ ಮಾಲೀಕರು ಇದ್ದಾರೆ ಮತ್ತು ಅದರಿಂದ ಬರುವ ಎಲ್ಲಾ ಆದಾಯವನ್ನು ಆರೋಪಿತನೇ ಉಪಯೋಗಿಸುತ್ತಿದ್ದಾನೆ ಎನ್ನುವ ಬಗ್ಗೆ ಯಾವುದೇ ಸಾಕ್ಷ್ಯಾದಾರಗಳು ಇರುವುದಿಲ್ಲ.

22. ನಿ.ಡಿ 8 ರಂತೆ ಸಿ.ಸಿ.1680/2023 ರಂತೆ ಮೇಘರಾಜ ಹೆಚ್.ಎಸ್. ಎಂಬುವರು ಈ ಆರೋಪಿತನ ವಿರುದ್ಧ 2023 ನೇ ಸಾಲಿನಲ್ಲಿ ಒಂದು ಚೆಕ್ ಬೌನ್ಸ್ ಪ್ರಕರಣವನ್ನು 2,00,000/- ರೂಗಳ ವಸೂಲಾತಿಗಾಗಿ ದಾಖಲು ಮಾಡಿದ್ದರು. ಸದರಿ ಪ್ರಕರಣದಲ್ಲಿ, ಈ ಪ್ರಕರಣದ ಆರೋಪಿತನು ನಿರ್ದೋಷಿ ಎಂಬುದಾಗಿ ತೀರ್ಮಾನಿಸಿ ನ್ಯಾಯಾಲಯವು ಬಿಡುಗಡೆ ಮಾಡಿರುತ್ತದೆ. ನಿ.ಡಿ 9 ರಂತೆ ಆರೋಪಿತನು ತನ್ನ ಖಾತೆಗೆ ಸಂಬಂಧಪಟ್ಟ ದಿನಾಂಕ 01/01/2022 ರಿಂದ 31/12/2022 ರವರೆಗಿನ ಸ್ಟೇಟ್‌ಮೆಂಟ್ ಆಫ್

ಅಕೌಂಟ್ಸ್ ಅನ್ನು ಹಾಜರುಪಡಿಸಿರುತ್ತಾನೆ. ಸದರಿ ಆರೋಪಿತನು ಬಿ.ಎ. ಪದವೀಧರನಾಗಿದ್ದು, ಬರೂರು ವ್ಯವಸಾಯ ಸೇವಾ ಸಂಘದಲ್ಲಿ ಮಾಸಿಕ 15,000/- ರೂಗಳ ಸಂಬಳಕ್ಕಾಗಿ ಸೇವೆ ಸಲ್ಲಿಸುತ್ತಿದ್ದನು ಎಂಬುದಾಗಿ ಹೇಳಿದ್ದಾನೆ. ಸದರಿ ಆರೋಪಿತನ ನಿ.ಡಿ 9 ರ ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್ ಅನ್ನು ಪರಿಶೀಲನೆ ಮಾಡಲಾಗಿ, ಸದರಿ ಒಂದು ವರ್ಷದ ಅವಧಿಯಲ್ಲಿ ಆರೋಪಿತನು ಗರಿಷ್ಠ 10,000/- ರೂಗಳಿಗಿಂತ ಹೆಚ್ಚಿನ ವ್ಯವಹಾರವನ್ನು ಮಾಡಿರುವುದಿಲ್ಲ. ಒಂದು ವೇಳೆ ಸದರಿ ಆರೋಪಿತನಿಗೆ ಸಾಕಷ್ಟು ಆದಾಯ ಇತ್ತು ಎಂದಾದಲ್ಲಿ, ಈ ಬಗ್ಗೆ ನಿ.ಡಿ 9 ರ ದಾಖಲೆಯಲ್ಲಿ ಉಲ್ಲೇಖ ಇರಬೇಕಾಗಿತ್ತು. ಆದ್ದರಿಂದ, ಸದರಿ ನಿ.ಡಿ 1 ರಿಂದ 9 ರ ದಾಖಲೆಗಳು ಆರೋಪಿತನ ಪ್ರತಿರಕ್ಷೆಗೆ ಪೂರಕವಾಗಿರುವುದಿಲ್ಲ.

23. ಆರೋಪಿತನು ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿನಲ್ಲಿ ಫಿರ್ಯಾದಿಯ ಆರ್ಥಿಕ ಸಾಮರ್ಥ್ಯವನ್ನು ಪ್ರಶ್ನಿಸಿರುತ್ತಾನೆ. ಆದರೆ, ಸದರಿ ಆರೋಪಿತನು ಫಿರ್ಯಾದಿಯ ಆರ್ಥಿಕ ಸಾಮರ್ಥ್ಯವನ್ನು ನಿ.ಪಿ-3 ರ ಲೀಗಲ್ ನೋಟೀಸ್ ತಲುಪಿದ ಕೂಡಲೇ ಪ್ರತ್ಯುತ್ತರ ನೋಟೀಸ್ ನೀಡುವ ಮೂಲಕ ಸದರಿ ಪ್ರತಿರಕ್ಷಣೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯವು 2025 Live Law(SC) 383 (Ashok Singh V/s. State of Uttara Pradesh and another) ರ ತೀರ್ಪಿನಲ್ಲಿ

Complainant has no owns to prove financial capacity at the threshold. Once the drawer admits to signing the cheque the presumption U/Sec. 138 of NI Act cannot rebutted merely by

questioning the complainant debt-giving capacity, especially when such defence not raised in the reply notice by the accused. The High Court wrongly imposed an initial burden on the complainant to prove financial capacity and loan details.

ಎಂದು ಅಭಿಪ್ರಾಯಪಟ್ಟಿರುತ್ತದೆ. ಮೇಲಿನ ಸದರಿ ತೀರ್ಪಿನಂತೆ ಈ ಪ್ರಕರಣದಲ್ಲಿಯೂ ಸಹ ಆರೋಪಿತನು ನಿ.ಪಿ-3 ರ ನೋಟೀಸ್ ತಲುಪಿದ ಕೂಡಲೇ ಫಿರ್ಯಾದಿಯ ಆರ್ಥಿಕ ಸಾಮರ್ಥ್ಯದ ಕುರಿತು ಯಾವುದೇ ನಿರ್ದಿಷ್ಟ ಪ್ರತಿರಕ್ಷೆಯನ್ನು ತೆಗೆದುಕೊಳ್ಳದ ಕಾರಣ ಪಾಟೀ ಸವಾಲಿನ ಹಂತದಲ್ಲಿ ಸದರಿ ಪ್ರತಿರಕ್ಷೆಯನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ.

24. ಅದೇ ರೀತಿಯಾಗಿ, ಈ ಪ್ರಕರಣದ ಆರೋಪಿತನು ಸ್ವತಃ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಂತೆ ಬಿ.ಎ. ಪದವೀಧರನಾಗಿರುತ್ತಾನೆ. ಆದ್ದರಿಂದ, ಬಿ.ಎ. ಪದವೀಧರನಾಗಿರುವುದಲ್ಲದೆ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ 7 ವರ್ಷಗಳಿಂದ ನೌಕರಿಯನ್ನು ಸಹ ಮಾಡುತ್ತಾ ಬಂದಿರುತ್ತಾನೆ. ಆದ್ದರಿಂದ, ಆರೋಪಿತನಿಗೆ ಚೆಕ್ಕಿನ ವ್ಯವಹಾರದ ಕುರಿತು ಸಾಕಷ್ಟು ಮಾಹಿತಿ ಇರುತ್ತದೆ. 2016 ರಲ್ಲಿ ಆರೋಪಿತನು ಫಿರ್ಯಾದಿಗೆ ಬಡ್ಡಿ ಸಹಿತ ಸಾಲವನ್ನು ಮರುಪಾವತಿ ಮಾಡಿದ್ದರೂ ಸಹ, 6 ವರ್ಷಗಳವರೆಗೆ ಅಂದರೆ 2022 ರಲ್ಲಿ, ಫಿರ್ಯಾದಿಯು ಈ ಪ್ರಕರಣವನ್ನು ದಾಖಲು ಮಾಡುವವರೆಗೆ ಫಿರ್ಯಾದಿಯ ವಿರುದ್ಧ ತನ್ನ ಚೆಕ್ಕನ್ನು ವಾಪಸ್ಸು ಕೊಡಲಿಲ್ಲ ಎಂಬ ಕಾರಣಕ್ಕಾಗಿ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಅದೇ ರೀತಿಯಾಗಿ, ನಿ.ಪಿ-3 ರ ನೋಟೀಸ್‌ಗೂ ಸಹ ಸೂಕ್ತ ಉತ್ತರವನ್ನು ಸಕಾಲದಲ್ಲಿ ನೀಡಿರುವುದಿಲ್ಲ. ಅದೂಅಲ್ಲದೆ, ಸದರಿ ಆರೋಪಿತನು

ಸಹಕಾರ ಸಂಘದ 58 ಲಕ್ಷ ರೂಗಳ ಹಣವನ್ನು ದುರುಪಯೋಗ ಮಾಡಿಕೊಂಡ ಬಗ್ಗೆ ಅವನ ವಿರುದ್ಧ ಪ್ರಕರಣವೂ ಸಹ ದಾಖಲಾಗಿದೆ ಎಂಬುದಾಗಿ ಸ್ವತಃ ಒಪ್ಪಿಕೊಂಡಿದ್ದಾನೆ. 2016 ನೇ ಸಾಲಿನಲ್ಲಿ, ಸದರಿ ಆರೋಪಿತನು ಆರೋಗ್ಯವಾಗಿ ಇದ್ದರೂ ಸಹ, ತಾನು ಭದ್ರತೆಗಾಗಿ ಫಿರ್ಯಾದಿಗೆ ನೀಡಿದ್ದೇನೆ ಎಂದು ಹೇಳುವ ನಿ.ಪಿ-1 ರ ಚೆಕ್ಕನ್ನು ವಾಪಸ್ಸು ನೀಡದ ಬಗ್ಗೆ ಪೊಲೀಸ್ ಠಾಣೆಯಲ್ಲಿ ಯಾವುದೇ ಪ್ರಕರಣವನ್ನು ದಾಖಲು ಮಾಡಿರುವುದಿಲ್ಲ. ಆದ್ದರಿಂದ, ಸದರಿ ಆರೋಪಿತನು ಫಿರ್ಯಾದಿಗೆ ಕಾನೂನಾತ್ಮಕವಾಗಿ ಮರುಪಾವತಿ ಮಾಡಬೇಕಾದ ಹಣದ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ, ಈ ಪ್ರಕರಣದಲ್ಲಿ ಸುಳ್ಳು ಪ್ರತಿರಕ್ಷೆಯನ್ನು ತೆಗೆದುಕೊಂಡಿದ್ದಾನೆ ಎಂಬುದಾಗಿ ಕಂಡುಬರುತ್ತದೆ. ಸದರಿ ಆರೋಪಿತನು ತನ್ನ ಪ್ರತಿರಕ್ಷೆಗೆ ಪೂರಕವಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಆರೋಪಿತನ ವಕೀಲರು ಅವಲಂಬಿಸಿರುವ ಮೇಲಿನ ಮಾನ್ಯ ಸಂವಿಧಾನಾತ್ಮಕ ನ್ಯಾಯಾಲಯಗಳ ತೀರ್ಪುಗಳಲ್ಲಿನ ತತ್ವಗಳು ಸದರಿ ಆರೋಪಿತನ ಪ್ರತಿರಕ್ಷೆಗೆ ಪೂರಕವಾಗಿರುವುದಿಲ್ಲ. ಅದೇ ರೀತಿಯಾಗಿ, ಸದರಿ ತೀರ್ಪುಗಳಲ್ಲಿನ ಪ್ರಕರಣದ ಸಂಗತಿಗಳು ಹಾಗೂ ಈ ಪ್ರಕರಣದ ಸಂಗತಿಗಳು ಭಿನ್ನವಾಗಿರುವುದರಿಂದ ಮೇಲ್ಕಂಡ ತೀರ್ಪುಗಳ ಲಾಭವನ್ನು ಆರೋಪಿತನಿಗೆ ನೀಡುವುದು ಸೂಕ್ತವಲ್ಲ ಎಂಬುದಾಗಿ ನ್ಯಾಯಾಲಯವು ಅಭಿಪ್ರಾಯಪಟ್ಟಿರುತ್ತದೆ. ಸದರಿ ಆರೋಪಿತನು ಫಿರ್ಯಾದಿಯ ಪರವಾಗಿ ಇರುವಂತಹ ಕಾನೂನಿನ ಪೂರ್ವಭಾವನೆಯನ್ನು ಸೂಕ್ತ ರೀತಿಯಲ್ಲಿ ಖಂಡಿಸಲು ಯಶಸ್ವಿಯಾಗಿರುವುದಿಲ್ಲ. ಆದ್ದರಿಂದ, ಸದರಿ ಫಿರ್ಯಾದಿಯು ತನ್ನ ದೂರಿನ ಎಲ್ಲಾ

ಸಂಗತಿಗಳನ್ನು ಸಾಬೀತುಪಡಿಸಿರುವುದರಿಂದ, ಸದರಿ ಆರೋಪಿತನು ಫಿರ್ಯಾದಿಗೆ ನಿ.ಪಿ-1 ರಲ್ಲಿನ ಚೆಕ್ಕಿನ ಮೊತ್ತವನ್ನು ಕಾನೂನಾತ್ಮಕವಾಗಿ ಪಾವತಿಸಬೇಕಾದ ಬಾಧ್ಯತೆಯನ್ನು ಹೊಂದಿದ್ದಾನೆ ಎಂಬುದಾಗಿ ನ್ಯಾಯಾಲಯವು ಅಭಿಪ್ರಾಯಪಡುತ್ತದೆ.

25. ಮೇಲಿನ ಚರ್ಚೆಯಿಂದ ಪಿರ್ಯಾದಿಯು ತನ್ನ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಾಧಾರಗಳಿಂದ, ಆರೋಪಿತನು ತನಗೆ ಕಾನೂನಾತ್ಮಕವಾಗಿ ಪಾವತಿಸಬೇಕಾದಂತಹ ಸಾಲಕ್ಕೆ ಪ್ರತಿಯಾಗಿ, ನಿಪಿ-1ರ ಚೆಕ್ಕನ್ನು ಬರೆದುಕೊಟ್ಟಿದ್ದಾನೆಂದು ರುಜುವಾತು ಪಡಿಸಿರುತ್ತಾರೆ ಎನ್ನುವ ಅಭಿಪ್ರಾಯಕ್ಕೆ ನ್ಯಾಯಾಲಯವು ಬಂದಿರುತ್ತದೆ. ಆದ್ದರಿಂದ, ಆರೋಪಿತನು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆ ಅಡಿಯಲ್ಲಿ ಅಪರಾಧ ಎಸಗಿರುವುದು ಸಾಭೀತಾಗಿರುತ್ತದೆ. ಆದ್ದರಿಂದ, ನಿಪಿ-1 ರಲ್ಲಿ ಒಳಗೊಂಡಿರುವ 2,10,000/- ರೂ. ಹಣದೊಂದಿಗೆ, ಆರೋಪಿತನು ಪರಿಹಾರವನ್ನು ಸಹ, ಪಿರ್ಯಾದಿಗೆ ಪಾವತಿಸಲು ಬದ್ಧನಾಗಿದ್ದಾನೆ, ಎಂಬ ಅಭಿಪ್ರಾಯಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ 357 ರ ಅಡಿಯಲ್ಲಿ ಪಿರ್ಯಾದಿಯು ಪರಿಹಾರವನ್ನು ಸಹ, ಪಡೆದುಕೊಳ್ಳಲು ಅರ್ಹನಿರುತ್ತಾನೆ ಮತ್ತು ಚೆಕ್ಕಿನ ಮೊತ್ತದೊಂದಿಗೆ ಹೆಚ್ಚುವರಿಯಾಗಿ 30,000/- ರೂ. ಜುಲ್ಮಾನೆಯನ್ನು ಭರಿಸಲು ಆರೋಪಿತನು ಬಾಧ್ಯನಾಗಿದ್ದಾನೆ ಎಂಬ ಅಭಿಪ್ರಾಯಕ್ಕೆ ಬರುತ್ತಾ, ಮೇಲಿನ ಅಂಶ 1 ರಿಂದ 4 ನ್ನು **ಸಕಾರಾತ್ಮಕವಾಗಿ** ಉತ್ತರಿಸುತ್ತೇನೆ.

26. **ಅಂಶ–5**:– ಮೇಲಿನ ಅಂಶ 1 ರಿಂದ 4 ರಲ್ಲಿ ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಕಂಡಂತೆಃ

ಆದೇಶ

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 255 (2) ರ ಅಡಿಯಲ್ಲಿ ನೀಡಿರುವ ಅಧಿಕಾರವನ್ನು ಚಲಾಯಿಸಿ, ಆರೋಪಿಯು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾನೆ ಎಂದು ಈ ನ್ಯಾಯಾಲಯವು ನಿರ್ಣಯಿಸಿರುತ್ತದೆ.

ಆರೋಪಿಯು ಚೆಕ್ಕಿನ ಹಣದೊಂದಿಗೆ 30,000/– ರೂ.ಗಳನ್ನು ಹೆಚ್ಚುವರಿಯಾಗಿ ಅಂದರೆ, ಒಟ್ಟು ರೂ. 2,40,000/– ಗಳನ್ನು ಜುಲ್ಮಾನೆ ಹಣವಾಗಿ ಪಾವತಿಸಲು ಆದೇಶವನ್ನು ನೀಡಿರುತ್ತದೆ. ಒಂದು ವೇಳೆ ಆರೋಪಿಯು ಸದರಿ ಜುಲ್ಮಾನೆ ಹಣವನ್ನು ಪಾವತಿಸಲು ವಿಫಲವಾದರೆ 1 ವರ್ಷದವರೆಗೆ ಸಾದಾ ಕಾರಾಗೃಹವಾಸದ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ ಎಂದು ಆದೇಶಿಸಿದೆ.

ಮುಂದುವರೆದು ಪಿರ್ಯಾದಿಯು ಜುಲ್ಮಾನೆ ಹಣದಲ್ಲಿ ರೂ. 2,35,000/– ಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ. 357 ರ ಅಡಿಯಲ್ಲಿ ಪರಿಹಾರವಾಗಿ ಪಡೆಯಲು ಅರ್ಹನಾಗಿದ್ದಾನೆ ಎಂದು ಆದೇಶಿಸುತ್ತದೆ ಮತ್ತು ಉಳಿದ ರೂ.5,000/– ಗಳ ಜುಲ್ಮಾನೆ ಹಣವನ್ನು ರಾಜ್ಯ ಸರ್ಕಾರಕ್ಕೆ ಪಾವತಿಸಲು ಆದೇಶಿಸಲಾಗಿದೆ.

ಆರೋಪಿತನು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ, ರದ್ದುಗೊಳಿಸಲಾಗಿದೆ.

ಆರೋಪಿತನಿಗೆ ತೀರ್ಪಿನ ದೃಢೀಕೃತ ಪ್ರತಿಯನ್ನು ಉಚಿತವಾಗಿ ನೀಡುವಂತೆ ಕಚೇರಿಗೆ ನಿರ್ದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಂದ ನೇರವಾಗಿ ಕಂಪ್ಯೂಟರಿನಲ್ಲಿ ಬೆರಳಚ್ಚು ಮಾಡಿಸಿ, ನಂತರ ಅದನ್ನು ಓದಿ, ತಪ್ಪುಗಳನ್ನು ತಿದ್ದುಪಡಿಮಾಡಿ, ಈ ದಿನ ಅಂದರೆ, ದಿನಾಂಕಃ 17 ನೇ ಆಗಸ್ಟ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.)

(ಮಾದೇಶ ಎಂ.ವಿ.,)
ಪ್ರಭಾರ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಸಾಗರ.

<u>ಅನುಬಂಧ</u>

1. ಪಿರ್ಯಾದುದಾರರ ಪರವಾಗಿ ವಿಚಾರಣೆಯಾದ ಸಾಕ್ಷಿಗಳ ಪಟ್ಟಿಃ

ಪಿ.ಡಬ್ಲೂ–1	ರಾಮಚಂದಪ್ಪ.

2. ಪಿರ್ಯಾದುದಾರರ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿಃ

ನಿ.ಪಿ–1	ಅಸಲು ಚೆಕ್ಕು
ನಿ.ಪಿ–2	ಹಿಂಬರಹ.
ನಿ.ಪಿ–3	ಕಾನೂನುಬದ್ಧ ನೋಟೀಸು.
ನಿ.ಪಿ–4	ಅಂಚೆ ರಶೀದಿ.

ನಿ.ಪಿ–5	ಅಂಚೆ ಇಲಾಖೆ ನೀಡಿದ ಹಿಂಬರಹ.

3. ಆರೋಪಿಯ ಪರ ವಿಚಾರಣೆಯಾದ ಸಾಕ್ಷಿಗಳ ಪಟ್ಟಿಃ

ಡಿ.ಡಬ್ಲೂ.1	ಪರಶುರಾಮ.

4. ಆರೋಪಿಯ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿಃ

ನಿ.ಡಿ.1	ದಿಃ18.01.2022 ರ ಭಾಗವತ್ ಆಸ್ಪತ್ರೆಯ ವೈದ್ಯರು ನೀಡಿರುವ 5 ರಶೀದಿಗಳು.
ನಿ.ಡಿ.2	ಭಾಗವತ್ ಆಸ್ಪತ್ರೆಯ ಡಿಸ್ಚಾರ್ಜ್ ಸಮ್ಮರಿ.
ನಿ.ಡಿ.3	ಎಂ ಆರ್ ಐ ವರದಿ.
ನಿ.ಡಿ.4	ದಿಃ15.02.2022 ರಂದು ವೈದ್ಯರು ನೀಡಿದ ವರದಿ.
ನಿ.ಡಿ.5	ಸರ್ವೆ ಸಂಖ್ಯೆ 25/2 ರ 2021–22 ನೇ ಸಾಲಿನ ಪಹಣಿ ಪತ್ರಿಕೆ
ನಿ.ಡಿ.6	ಸರ್ವೆ ಸಂಖ್ಯೆ 76/2 ರ 2021–22 ನೇ ಸಾಲಿನ ಪಹಣಿ ಪತ್ರಿಕೆ
ನಿ.ಡಿ.7	ಸರ್ವೆ ಸಂಖ್ಯೆ 88/2 ರ 2021–22 ನೇ ಸಾಲಿನ ಪಹಣಿ ಪತ್ರಿಕೆ
ನಿ.ಡಿ.8	ಸಿಸಿ.1680/2023 ರ ತೀರ್ಪಿನ ದೃಢೀಕೃತ ನಕಲು.

ನಿ.ಡಿ.9	ಸ್ಟೇಟ್ ಮೆಂಟ್ ಆಫ್ ಅಕೌಂಟ್ಸ್

ಪ್ರಭಾರ ಒಂದನೇ ಹೆಚ್ಚುವರಿ ಸಿವಿಲ್
ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,ಸಾಗರ.